**<u>ಸಾಕ್ಷಿಯನ್ನು ಈ ದಿನ ದಿಃ 21.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ</u>

1. ಘಟನೆ ನಡೆದ ಸ್ಥಳದಿಂದ ಗಣಪತಿ ದೇವಸ್ಥಾನಕ್ಕೆ 1 ಅಡಿ ದೂರವಾಗುತ್ತದೆ. ದೇವಸ್ಥಾನದ ಆವರಣದಿಂದ ಸ್ವಲ್ಪ ದೂರದಲ್ಲಿ ಘಟನೆ ನಡೆದಿರುತ್ತದೆ. ದೇವಸ್ಥಾನದಿಂದ ನಡೆದುಕೊಂಡು ಬಂದರೆ ಘಟನಾ ಸ್ಥಳಕ್ಕೆ ಸುಮಾರು 4 ಹೆಜ್ಜೆ ಆಗುತ್ತದೆ. ನಾನು ಆ ಸ್ಥಳಕ್ಕೆ ಹೋಗುವ ಮೊದಲು ನನಗೆ ಗಲಾಟೆ ಶಬ್ದ ಕೇಳಿ ಬಂತು. ಜೋರು ಜೋರಾಗಿ ಮಾತನಾಡುತ್ತಿದ್ದರು. ಹೊಡೆತ ಬಡಿತ ನಡೆಯುತ್ತಿತ್ತು. ನಾನು ಸ್ಥಳಕ್ಕೆ ಹೋದಾಗ ಗಾಯಾಳು ನಾರಾಯಣ ಸ್ವಾಮಿ ಕೆಳಕ್ಕೆ ಬಿದ್ದಿದ್ದರು. ಸುತ್ತ ಮುತ್ತಲಿನ ಜನರೆಲ್ಲರು ಅಲ್ಲಿ ಸೇರಿದ್ದರು. ನಾನು ಆ ಜನರನ್ನು ತಳ್ಳಿಕೊಂಡು ಹೋಗಿ ನಾರಾಯಣ ಸ್ವಾಮಿ ರವರು ಬಿದ್ದಿದ್ದನ್ನು ನೋಡಿದೆ. ನಾನು ನೋಡಿದಾಗ ಅವರ ಕುತ್ತಿಗೆಯಲ್ಲಿ , ಕೈನಲ್ಲಿ ರಕ್ತ ಸುರಿಯುತ್ತಿತ್ತು.

2. ನಾನು ಅದೇ ಬಡಾವಣೆಯವನು. ಘಟನಾ ಸ್ಥಳದಿಂದ ನನ್ನ ಮನೆಗೆ ಎರಡು ಅಡಿಗಳಷ್ಟು ಅಂತರವಿದೆ. ಆ ಏರಿಯಾದಲ್ಲಿ ಈ ಘಟನೆಗೆ ಸಂಬಂಧಪಟ್ಟ ಎಲ್ಲರ ಪರಿಚಯ ಇದೆ ಮತ್ತು ಅವರ ಹೆಸರುಗಳು ಸಹ ಗೊತ್ತಿವೆ. ಈ ಘಟನೆ ನಡೆಯುವ 5 ವರ್ಷಗಳ ಮುಂಚಿನಿಂದ ಈ ಆರೋಪಿತರ ಪರಿಚಯ ನನಗೆ ಇತ್ತು. ಘಟನೆ ನಡೆಯುವ 8 ವರ್ಷಗಳ ಮುಂಚಿನಿಂದ ಗಾಯಾಳು ನಾರಾಯಣ ಸ್ವಾಮಿ ರವರ ಪರಿಚಯ ನನಗೆ ಇತ್ತು. ಮೈಸೂರಿನ ಕಾವೇರಿ ನಗರದಲ್ಲಿ ನಾರಾಯಣ ಸ್ವಾಮಿರವರ ತೋಟವಿದೆ. ಆ

ತೋಟದಲ್ಲಿ ನಾನು ಬಾಡಿಗೆಗೆ ಇದ್ದೇನೆ. ಆರೋಪಿತರು ನಮ್ಮ ಏರಿಯಾದಲ್ಲೇ ಇರುವುದರಿಂದ ಅವರ ಪರಿಚಯ ನನಗಿದೆ. ನಮ್ಮ ಏರಿಯಾ ಕಾವೇರಿ ನಗರ. ಆರೋಪಿತರು ಏನು ಕೆಲಸ ಮಾಡಿಕೊಂಡಿರುತ್ತಾರೆ ಎನ್ನುವುದು ನಮಗೆ ಗೊತ್ತಿಲ್ಲ. ನಾನು ಜೆ ಎಸ್ ಎಸ್ ಮೆಡಿಕಲ್ ಕಾಲೇಜಿನ ಬಸ್ಸ ಕ್ಲೀನರ್ ಆಗಿ ಕೆಲಸ ಮಾಡಿಕೊಂಡಿದ್ದೇನೆ. ನಾನು ಯಾವುದೇ ರಾಜಕೀಯ ಪಕ್ಷಕ್ಕೂ ಸೇರಿದವನಲ್ಲ. ನಾರಾಯಣ ಸ್ವಾಮಿ ರವರು ಬಿ ಜೆ ಪಿ ಪಕ್ಷಕ್ಕೆ ಸೇರಿದವರು. ಆರೋಪಿತರು ಯಾವ ಪಕ್ಷಕ್ಕೆ ಸೇರಿದವರು ಎನ್ನುವುದು ನನಗೆ ಗೊತ್ತಿಲ್ಲ.

3. ಚುನಾವಣೆಗೆ ಸಂಬಂಧಪಟ್ಟಂತೆ ಆರೋಪಿತರಿಗೂ ಮತ್ತು ನಾರಾಯಣ ಸ್ವಾಮಿಗೂ ದ್ವೇಷ ಇತ್ತು. ಈ ವಿಷಯ ನನಗೆ ಗೊತ್ತಿತ್ತು. ಯಾವ ವರ್ಷದ, ಯಾವ ಚುನಾವಣೆಗೆ ಸಂಬಂಧಪಟ್ಟಂತೆ ಆರೋಪಿತರು ಮತ್ತು ನಾರಾಯಣ ಸ್ವಾಮಿಯ ನಡುವೆ ದ್ವೇಷ ಇತ್ತು ಎನ್ನುವುದನ್ನು ನನಗೀಗ ಹೇಳಲಾಗುವುದಿಲ್ಲ.

4. ನಮ್ಮ ಬಸ್ಸಿನ ಲಾಗ್ ಬುಕ್ ಕಾಲೇಜಿನ ಕಛೇರಿಯಲ್ಲಿ ಇರುತ್ತದೆ ಎನ್ನುವುದು ಸರಿ. ಲಾಸ್ಟ್ ಟ್ರಿಪ್ ಆದ ನಂತರ ಡ್ರೈವರ್ ಆ ಪುಸ್ತಕದಲ್ಲಿ ನಮೂದಿಸುತ್ತಾರೆ ಎನ್ನುವುದು ಸರಿ. ಲಾಗ್ ಪುಸ್ತಕದ ಪ್ರಕಾರ ಆ ದಿನ ರಾತ್ರಿ 08.30 ಕ್ಕೆ ಕೊನೆಯ ಟ್ರಿಪ್ ಮುಗಿಸಿ, ನಮೂದಿಸಿ, ಸಹಿ ಹಾಕಿ ಡ್ರೈವರ್ ಹೋಗಿರುತ್ತಾರೆ ಎನ್ನುವುದು ಸರಿ . ನಾನು ಮತ್ತು ಡ್ರೈವರ್ ಒಟ್ಟಿಗೆ ಬಸ್ಸನ್ನು ಅಲ್ಲಿ ಬಿಟ್ಟು ಹೋದೆವು ಎನ್ನುವುದು ಸರಿ . ನಾವು ಅಂದು ಬಸ್ಸನ್ನು ನಿಲ್ಲಿಸಿದ ಜಾಗ ಮೈಸೂರಿನ ಬನ್ನಿ ಮಂಟಪ ಎನ್ನುವುದು ಸರಿ . ಅಲ್ಲಿಂದ ಕಾವೇರಿ ನಗರಕ್ಕೆ ಹೋಗಲು ಸುಮಾರು ಅರ್ಧ , ಮುಕ್ಕಾಲು ಗಂಟೆ ಬೇಕಾಗುತ್ತದೆ. ಅಲ್ಲಿ ಗಣೇಶನನ್ನು ಇಡಲಾಗಿತ್ತು. ಉತ್ಸವ ನಡೆಯುತ್ತಿತ್ತು. ಅಲ್ಲಿ ಪೆಂಡಾಲ್ ಹಾಕಿ ಗಣೇಶನನ್ನು ಇಟ್ಟ ಜಾಗ ಬೇರೆಯವರಿಗೆ

ಸೇರಿದ್ದು. ಆರೋಪಿತರರಿಗೆ ಸೇರಿದ ಜಾಗವಲ್ಲ. ಆ ಗಣೇಶನನ್ನು ಇಟ್ಟಿದ್ದು , ನಾರಾಯಣ ಸ್ವಾಮಿಯವರು ಎನ್ನುವುದು ಸರಿ . ಅಲ್ಲಿ ಗಣೇಶನನ್ನು ಇಡಲು ಅವರು ಪರವಾನಗೆಯನ್ನು ಪಡೆದಿದ್ದರೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಘಟನೆ ನಡೆದ ದಿನ, ರಾತ್ರಿ ಗಣೇಶನನ್ನು ವಿಸರ್ಜಿಸುವ ಕಾರ್ಯಕ್ರಮ ಇತ್ತು. ಮೆರವಣಿಗೆಗೆ ರೆಡಿ ಮಾಡಿಕೊಂಡಿದ್ದರು ಎನ್ನುವುದು ಸರಿ . ಗಣಪತಿ ವಿಸರ್ಜನೆ ಮಾಡಲು ಕುಡಿದುಕೂಂಡು ಬರುವವರು ಸಹ ಸಾಮಾನ್ಯವಾಗಿ ಇರುತ್ತಾರೆ ಎನ್ನುವುದು ಸರಿ. ಆರೋಪಿತರು ಆ ಏರಿಯಾದಲ್ಲಿ ಆಟೋ ಚಲಾಯಿಸಿಕೊಂಡು ಇದ್ದವರು ಎನ್ನುವುದು ಸರಿ . ಅವರುಗಳ ಮನೆಗಳು ಎಲ್ಲಿದ್ದವು ಎನ್ನುವುದು ಗೊತ್ತಿಲ್ಲ. ಗಣಪತಿ ವಿಸರ್ಜಿಸುವ ಮೆರವಣಿಗೆಯಲ್ಲಿ ಬೇರೆಯವರು ಸಹ ಕುಡಿದುಕೊಂಡು ಬಂದು ಸೇರಿಕೊಳ್ಳುತ್ತಾರೆ ಎನ್ನುವುದು ಸರಿ .

5. ಪೋಲೀಸರು ಆ ದಿನ ರಾತ್ರಿ ನನ್ನನ್ನು ಘಟನೆಯ ಬಗ್ಗೆ ಕೇಳಿ ಬರವಣಿಗೆ ಮಾಡಿಕೊಂಡರು. ನಾನು ನನ್ನ ಶರ್ಟನ್ನು ಮನಗೆ ಹೋಗಿ ಬಿಚ್ಚಿದ್ದೆ. ಆಗ ಪೋಲೀಸರು ನನ್ನ ಜೊತೆಗೆ ಬಂದಿರಲಿಲ್ಲ. ಆ ರಾತ್ರಿ ಪೋಲೀಸರು ಬರವಣಿಗೆಯನ್ನು ಘಟನೆ ನಡೆದ ಸ್ಥಳದಲ್ಲಿ ಬರೆದರು. ನಾನು ಆ ಸ್ಥಳದಲ್ಲೇ ಆ ಶರ್ಟ ನ್ನು ಪೋಲೀಸರಿಗೆ ಬಿಚ್ಚಿ ಕೊಟ್ಟಿದ್ದೆ. ನಾನು ನನ್ನ ಮನೆಯ ಪಕ್ಕದಲ್ಲೇ ಶರ್ಟ ನ್ನು ಬಿಚ್ಚಿಕೂಟ್ಟಿದ್ದೆ. ಮಹಜರ್ ನಲ್ಲಿ ಇರುವ ವಿಷಯಗಳನ್ನು ನಾನು ಹೇಳಿದೆ. ಪೋಲೀಸರು ಬರೆದುಕೂಂಡರು. ಪೋಲೀಸರು ಆ ಸ್ಥಳಕ್ಕೆ ಬರುವಾಗಲೇ ಬಿಳಿಯ ಬಟ್ಟೆಯನ್ನು , ಮೊಹರನ್ನು , ಅರಗನ್ನು ತಂದಿದ್ದರು. ಅಲ್ಲಿ ಎಷ್ಟು ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡರೋ ಅಷ್ಟು ಬಿಳಿಯ ಬಟ್ಟೆಗಳನ್ನು ಮಾತ್ರ ಪೋಲೀಸರು ತಂದಿದ್ದರು ಎನ್ನುವುದು ಸರಿ. ಬಟ್ಟೆಯ ಒಳಗೆ ವಸ್ತುಗಳನ್ನು ಇಟ್ಟ ನಂತರ ಅರಗಿನ ಮೊಹರನ್ನು ಹಾಕಿದರು. ಆ ಮೊಹರಿನ ಅಕ್ಷರವನ್ನು ನಾನು ನೋಡಲಿಲ್ಲ. ಆ

ಮೊಹರು (ಸೀಲ) ನ್ನು ನನ್ನ ಕೈಗೆ ಕೊಟ್ಟರು. ಈಗ ಅದು ನನ್ನ ಬಳಿಯಲ್ಲಿ ಇಲ್ಲ. ಅಂತಹ ಮೊಹರನ್ನು ನನಗೆ ನ್ಯಾಯಾಲಯ ಕೇಳಿದಾಗ ಕೊಡಬೇಕು ಎಂದು ನೀಡಿರುವುದಿಲ್ಲ. ಆ ದಿನ ಆ ಸ್ಥಳದಲ್ಲಿ ಒತ್ತಿದ ಮೊಹರೇ , ನ್ಯಾಯಾಲಯದ ಮುಂದೆ ವಸ್ತುಗಳನ್ನು ತೆರೆದಾಗ ಸದರಿ ಮೊಹರಿನ ಅಕ್ಷರವೇ ಇತ್ತು.

6. ಮಹಜರ್ ಗೆ ಮೊದಲು ನಾನೇ ಸಹಿ ಹಾಕಿರುತ್ತೇನೆ. ನನ್ನ ಎದುರು ಅ ಮಹಜರ್ ಗೆ ವೀರಭದ್ರಪ್ಪ , ದೊಡ್ಡ ಸಿದ್ದ , ಕುಮಾರ ಸಹಿ ಮಾಡಿದರು. ಆ ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಪುನಃ ನಾನು ಇಂದಿನವರೆಗೂ ನೋಡಿರುವುದಿಲ್ಲ. ಆ ಮಹಜರ್ ಬರೆದ ಜಾಗದಿಂದ ಲೈಟ್ ಕಂಭ 3 ಹೆಜ್ಜೆಗಳ ಅಂತರದಲ್ಲಿತ್ತು. ಆ ಸ್ಥಳದಲ್ಲಿದ್ದ ವಸ್ತುಗಳನ್ನು ಮಹಜರ್ ನ್ನು ಬರೆದ ಪೋಲೀಸ್ ಸಿಬ್ಬಂದಿ ಆ ಸ್ಥಳದಿಂದ ತೆಗೆದುಕೊಂಡರು. ನಂತರ ಬೇರೆ ಕಡೆ ಹೋಗಿ ಕುಳಿತು ಮಹಜರ್ ಬರೆದರು ಎನ್ನುವುದು ಸರಿ .

7. ನಾನು ಆ ದಿನ ಆ ಸ್ಥಳದಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ. ಇನ್ನಿಬ್ಬರು ಮಹಿಳಯರು ಸಹ ಆ ಸ್ಥಳದಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ. ನಾನು ಕಣ್ಣಾರೆ ಯಾವುದೇ ಘಟನೆ ನೋಡಿರುವುದಿಲ್ಲ ಎನ್ನುವುದು ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 2 ರಿಂದ 5 ನೇ ಆರೋಪಿ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ.</u>

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.